ಅಧಿಸೂಚನೆಯನ್ನು ವಿಶ್ವವಿದ್ಯಾಲಯವು ದಿ: 3–4–2014 ರಂದು ಹೊರಡಿಸಿದೆ. ಅದರಂತೆ ನೇಮಕಾತಿ ಪ್ರಕಿಯೆಯು ಪ್ರಗತಿಯಲ್ಲಿದೆ.

(ಈ) ಹೌದು.

ಶಬರಿಮಲೆಯಲ್ಲಿ ಕರ್ನಾಟಕ ಭವನ ನಿರ್ಮಾಣ

80(84) **ಶ್ರೀ ಗೋಪಾಲಯ್ಯ ಕೆ (ಮಹಾಲಕ್ಷ್ಮೀ ಲೇಔಟ್)** :–ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಶಬರಿ ಮಲೈಯಲ್ಲಿನ ನಿಲಕ್ಕಲ್‌ನಲ್ಲಿ ಸರ್ಕಾರ ಕರ್ನಾಟಕ ಭವನವನ್ನು ನಿರ್ಮಿಸಲು ಉದ್ದೇಶಿಸಿದೆಯೇ ;

(ಆ) ಹಾಗಿದ್ದಲ್ಲಿ, ಈ ಭವನ ನಿರ್ಮಾಣಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು;

(ಇ) ಎಷ್ಟು ಕೊಠಡಿಗಳ ಕಟ್ಟಡ ನಿರ್ಮಿಸಲಾಗುವುದು ;

(ಈ) ಇದರಿಂದ ಕರ್ನಾಟಕದಿಂದ ಹೊಗತಕ್ಕ ಎಷ್ಟು ಯಾತ್ರಾರ್ಥಿಗಳಿಗೆ ವಸತಿ ಸೌಲಭ್ಯ ಲಭ್ಯವಾಗುವುದು ;

(ಉ) ಈ ಕಟ್ಟಡ ನಿರ್ಮಾಣಕ್ಕೆ ಕೇರಳ ಹೈಕೋರ್ಟ್ ತಡೆಯಾಜ್ಞೆ ನೀಡಿದೆಯೇ ;

(ಊ) ಹಾಗಿದ್ದಲ್ಲಿ, ಇದನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಸಿದ್ದರಾಮಯ್ಯ :– ಮಾನ್ಯ ಮುಖ್ಯಮಂತ್ರಿಗಳು :

(ಅ) ಹೌದು.

(ಆ) ಕರ್ನಾಟಕ ಭವನ ನಿರ್ಮಾಣಕ್ಕೆ ರೂ.2.00 ಕೋಟಿ ವೆಚ್ಚ ಆಗುವುದಾಗಿ ಅಂದಾಜಿಸಲಾಗಿದೆ.

(ಇ) ಕರ್ನಾಟಕ ಭವನದಲ್ಲಿ ಈ ಕೆಳಕಂಡಂತೆ ಸೌಕರ್ಯಗಳನ್ನು ಒದಗಿಸುವ ಉದ್ದೇಶವನ್ನು ಇರಿಸಿಕೊಂಡು ನಕ್ಷೆಯನ್ನು ತಯಾರಿಸಲಾಗಿದೆ.

1) <u>ನೆಲ ಮಹಡಿಯಲ್ಲಿ:</u> ಪೊಲೀಸರ ಡಾರ್ಮಿಟರಿ, ಆರೋಗ್ಯ ಕೇಂದ್ರ ಕ್ಯಾಂಟೀನ್ ಹಾಗೂ ಶೌಚಾಲಯಗಳು.

2) <u>ಮೊದಲನೇ ಮಹಡಿಯಲ್ಲಿ:</u> ಪುರುಷರು ಮತ್ತು ಸ್ತ್ರೀಯರಿಗೆ ಪ್ರತ್ಯೇಕ ಡಾರ್ಮಿಟರಿ ಮತ್ತು ಶೌಚಾಲಯಗಳು.

3) <u>ಎರಡನೇ ಮಹಡಿಯಲ್ಲಿ:</u> 22 ಸಾಮಾನ್ಯ ಕೊಠಡಿಗಳು.

4) <u>ಮೂರನೇ ಮಹಡಿಯಲ್ಲಿ:</u> 6 ವಿ.ಐ.ಪಿ. ಕೊಠಡಿಗಳು.

(ಈ) (1) ನೆಲ ಮಹಡಿಯ ಪೊಲೀಸರ ಡಾರ್ಮಿಟರಿಯಲ್ಲಿ ಒಟ್ಟು 100 ಜನ ಪೊಲೀಸ್ ಸಿಬ್ಬಂದಿಗೆ ವಸತಿ ಸೌಲಭ್ಯ ಲಭ್ಯವಾಗುವುದು.

(2) ಮೊದಲನೇ ಮಹಡಿಯಲ್ಲಿ ಒಟ್ಟು 600 ಜನ ಭಕ್ತಾದಿಗಳಿಗೆ ವಸತಿ ಸೌಲಭ್ಯ ಲಭ್ಯವಾಗುವುದು.

(3) ಎರಡನೇ ಮಹಡಿಯಲ್ಲಿ ಒಟ್ಟು 100 ಜನ ಭಕ್ತಾದಿಗಳಿಗೆ ವಸತಿ ಸೌಲಭ್ಯ ಲಭ್ಯವಾಗುವುದು.

(4) ಮೂರನೇ ಮಹಡಿಯಲ್ಲಿ 20 ಜನ ಅತೀ ಗಣ್ಯ ವ್ಯಕ್ತಿಗಳಿಗೆ ವಸತಿ ಸೌಲಭ್ಯ ಲಭ್ಯವಾಗುವುದು.

(ಉ) ಈ ಬಗ್ಗೆ ಆಯುಕ್ತಾಲಯದಿಂದ ತಿರುವನಂತಪುರಂ ದೇವಸಂ ಬೋರ್ಡ್ ಇವರಿಗೆ ದಿನಾಂಕ:10.06.2014 ರಂದು ಪತ್ರ ಬರೆದು ವರದಿ ಪಡೆಯಲಾಗುತ್ತಿದೆ.

(ಊ) ಈ ಸಂಬಂಧ ಕೇರಳ ಉಚ್ಚನ್ಯಾಯಾಲಯದಲ್ಲಿ ತಡೆಯಾಜ್ಞೆ ಇರುವ ಬಗ್ಗೆ ಖಚಿತ ಪಡಿಸಿಕೊಂಡು, ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಜರುಗಿಸಲಾಗುವುದು.

ಮೆಟ್ರೋ ಎರಡನೇ ಹಂತದ ಕಾಮಗಾರಿ

83(87) ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್):– ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಬೆಂಗಳೂರು ಮೆಟ್ರೋ ರೈಲು ಯೋಜನೆಯ 2ನೇ ಹಂತದ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆಯೇ ;

(ಆ) ಇದರಲ್ಲಿ ಎಷ್ಟು ಕಿಲೋ ಮೀಟರ್ ಪೂರ್ಣಗೊಳಿಸಲಾಗಿದೆ ;

(ಇ) ಇದರ ಅಂದಾಜು ವೆಚ್ಚ ಎಷ್ಟು ;